## ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ
## ಸಿ.ಸಿ. 3657/2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 2**

**ದಿನಾಂಕಃ** 05.06.2026 **ಸಿಡಬ್ಲ್ಯೂ 5**

| | |
|---|---|
| ಹೆಸರು | ಶ್ರೀಮತಿ ರೇಖಾ ಎಸ್ ಹೆಚ್ |
| ತಂದೆ ಹೆಸರು | ಹನುಮಂತಪ್ಪ |
| ವಯಸ್ಸು | 33 ವರ್ಷ |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜನವರಿ 9 2023 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ನಿರೀಕ್ಷಕರ ಕಚೇರಿಲ್ಲಿ ಅಬಕಾರಿ ಉಪ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 04.03.2025 ರಂದು ಚಾಸಾ.1 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿ ಅದೇ ದಿನ ಪ್ರಕರಣದ ಪಂಚರಾದ ಚಾಸಾ.2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 05.03.2025 ರಂದು ಗುನ್ನೆ ನಡೆದ ಸ್ಥಳದ ಪರಿಶೀಲನಾ ವರದಿ ತಯಾರಿಸಿರುತ್ತೇನೆ. ದಿಃ 27.03.2025 ರಂದು ಆರೋಪಿಯ ಹೇಳಿಕೆ ಪಡೆದಿರುತ್ತೇನೆ.

ದಿಃ 08.04.2025 ರಂದು ಪ್ರಕರಣದಲ್ಲಿ ರಾಸಾಯನಿಕ ಮಾದರಿಗಾಗಿ ತೆಗೆದ ಮು ಮಾಲುಗಳನ್ನು ಪರೀಕ್ಷೆಗಾಗಿ ರಾಸಾಯನಿಕ ಪ್ರಯೋಗಾಲಯ ಚಿತ್ರದುರ್ಗಕ್ಕೆ ಕಳುಹಿಸಿರುತ್ತೇನೆ. ದಿಃ 15.04.2025 ರಂದು ವರದಿ ಸ್ವೀಕರಿಸಿರುತ್ತೇನೆ. ಅದೇ ದಿನ ಚಾಸಾ.4 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 28.04.2025 ರಂದು ಪ್ರಕರಣದ ಹನಗವಾಡಿ ಗ್ರಾಮ ಪಂಚಾಯ್ತಿಗೆ ಮನೆ ಮಾಲೀಕರ ಕುರಿತು ವರದಿ ನೀಡುವಂತೆ ಪತ್ರ ನೀಡಿರುತ್ತೇನೆ. ದಿಃ 15.05.2025 ರಂದು ಗ್ರಾಮ ಪಂಚಾಯ್ತಿಯಿಂದ ವರದಿ ಸ್ವೀಕರಿಸಿರುತ್ತೇನೆ. ದಿಃ 29.05.2025 ರಂದು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಗುನ್ನೆ ನಡೆದ ಸ್ಥಳದ ಪರಿಶೀಲನಾ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಸಾಕ್ಷಿಯ ಸಹಿ ನಿಪಿ.4(ಎ) ಎಂದು, ರಾಸಾಯನಿಕ ವಿಶ್ಲೇಷಕರಿಗೆ ಬರೆದ ಪತ್ರವನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5 (ಎ) ಎಂದು, ರಾಸಾಯನಿಕ ವರದಿ ನಿಪಿ.6 ಮತ್ತು ಸಹಿಯನ್ನು ನಿಪಿ.6 (ಎ) ಎಂದು, ಪಿಡಿಒ ಹನಗವಾಡಿ ರವರಿಗೆ ಬರೆದ ಪತ್ರವನ್ನು ನಿಪಿ.7 ಎಂದು ಸಾಕ್ಷಿಯ ಸಹಿಯನ್ನು ನಿಪಿ.7(ಎ)

ಎಂದು, ಪಿಡಿಒ ರವರ ವರದಿ ನಿಪಿ.8 ಎಂದು ಸಾಕ್ಷಿಯ ಸಹಿ ನಿಪಿ.8(ಎ) ಆರೋಪಿತರ ಸ್ವಖುಷಿ ಹೇಳಿಕೆ ನಿಪಿ.9 ಮತ್ತು ಸಾಕ್ಷಿಯ ಸಹಿ ನಿಪಿ.9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿತರನ್ನು ಹಾಗೂ ಮು.ಮಾ ನ್ನು ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 10 ಹೈವರ್ಡಸ ವಿಸ್ಕಿಯ ಟೆಟ್ರಾ ಪ್ಯಾಕೆಗಳು ಹಾಗೂ 7 ಒ ಸಿ ವಿಸ್ಕಿಯ, 9 ಮ್ಯಾಕಿತೋಷ್ಷ, ಎಲ್ಟಿಗ್ರಾಯ್ 15 ಟೆಟ್ರಾ ಪ್ಯಾಕಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ 1 ರಿಂದ 42 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದಃ**

ಮು.ಮಾಲುಗಳನ್ನು ಜಪ್ತುಪಡಿಸಿಕೊಳ್ಳವಾಗ ನಾನು ಹಾಜರಿಲ್ಲದ್ದರಿಂದ ಅವುಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ಗುನ್ನಾ ಸ್ಥಳ ಮನೆ ಸುತ್ತಮುತ್ತ ಇಟ್ಟಿಬಟ್ಟಿ ಹಾಗೂ ಸಾಕಷ್ಟು ಮನೆ ಇವೆ ಎಂದರೆ ಸರಿ. ನಾನು ಗುನ್ನಾ ಸ್ಥಳದಲ್ಲಿ ಸ್ಥಳದ ಪರಿಶೀಲನಾ ಬಗ್ಗೆ ಪಂಚನಾಮ ಮಾಡಿ ಸ್ಥಳೀಕರ ಸಹಿ ಪಡೆದಿರುವುದಿಲ್ಲ. ಮು.ಮಾಲುಗಳು ಸಾಮಾನ್ಯವಾಗಿ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಚಾಸಾ.1 ರಿಂದ 3 ಹಾಗೂ ಆರೋಪಿತರ ಹೇಳಿಕೆಗಳನ್ನು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಗುನ್ನಾ ಸ್ಥಳಕ್ಕೆ ಹೋಗದೇ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಪರಿಶೀಲನಾ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ಮು.ಮಾ ಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನಿರಪರಾದಿಯಾದ ಆರೋಪಿ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ